**ಸಿ.ಡಬ್ಲೂ-7 / ಪಿ.ಡಬ್ಲೂ-10**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 36/2017**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೆನ್ನಸ್ವಾಮಿ |
| ತಂದೆಯ ಹೆಸರು | : | ನಂಜುಂಡಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚಿಲಕಹಳ್ಳಿ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1 ನನ್ನ ಬಾವ. ಆರೋಪಿಗಳು ನಮ್ಮ ಗ್ರಾಮದವರು.

2016 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಆಲದಮ್ಮನ ದೇವಸ್ಥಾನದ ಆವರಣದಲ್ಲಿ ಕ್ರಿಕೇಟ್ ಆಡುವ ವಿಚಾರದಲ್ಲಿ ಆರೋಪಿಗಳು ಚಾಸಾ-2 ರವರ ನಡುವೆ ಗಲಾಟೆ ನಡೆದಿದ್ದು, ಗಲಾಟೆ ಬಿಡಿಸಲು ಹೋದ ಚಾಸಾ-3 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಬೈದು ಕ್ರಿಕೇಟ್ ಬ್ಯಾಟ್ ನಿಂದ ಹೊಡೆದಿರುತ್ತಾರೆ. ಆರೋಪಿಗಳು ಕ್ರಿಕೇಟ್ ಬ್ಯಾಟ್ ನಿಂದ ಚಾಸಾ-2 ರವರ ಬಲರಟ್ಟೆಗೆ ಮತ್ತು ಬಲಗಾಲಿಗೆ ಹೊಡೆದಿದ್ದರು. ನಂತರ ಊರಿನವರು ಗಲಾಟೆ ಬಿಡಿಸಿ ನನಗೆ ಫೋನ್ ಮಾಡಿದಾಗ ನಾನು ಸ್ಥಳಕ್ಕೆ ಹೋಗಿದ್ದು, ಚಾಸಾ-1 ಮತ್ತು ನಾನು ಚಾಸಾ-2 ಮತ್ತು 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಕ್ರಿಕೇಟ್ ಬ್ಯಾಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುದ್ದೆ ಮಾಲು-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಿ.ಡಬ್ಲೂ–7 / ಪಿ.ಡಬ್ಲೂ–10

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಹೆಚ್.ಎಸ್.ಎಂ, ವಕೀಲರಿಂದಃ ಸಮಯ ಕೋರಿರುತ್ತಾರೆ, ರೂ.400/– ಖರ್ಚಿನೊಂದಿಗೆ ಸಮಯ ನೀಡಲಾಯಿತು .**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/–

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**